ಸಂಪೂರ್ಣವಾಗಿ ಎರ್ರಾಡಿಕೇಟ್ ಮಾಡಲೇಬೇಕೆಂದು ತಿಳಿಸಿದ್ದೇನೆ. ಹುಳಿಯಾರು ಇಡೀ ಭಾರತದಲ್ಲಿ ಅತ್ಯಂತ ಹೆಚ್ಚಿಗೆ ಮಲೇರಿಯಾ ಇರತಕ್ಕ ಜಾಗ ಮತ್ತು ಪ್ರತಿವರ್ಷ ಇಲ್ಲಿ ಕಾಲರಾ ಕೂಡ ಬರುತ್ತಿರುತ್ತದೆ. ಆದ್ದರಿಂದ ಇಲ್ಲಿ ತಾವು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇದರ ಜೊತೆಗೆ ನಾಳೆ ೨೨ನೇ ತಾರೀಖು ಚಿಕ್ಕನಾಯ್ಕನಹಳ್ಳಿಯಲ್ಲಿ ವಿಕಾವಶಿ ಜಾತ್ರೆ ಕೂಡ ಪ್ರಾರಂಭವಾಗುತ್ತಿದೆ. ಇದನ್ನು ಯಾವುದೇ ಕಾರಣದಿಂದಲೂ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅಲ್ಲೂ ಕೂಡ ಮುಂಜಾಗರೂಕತೆ ತೆಗೆದುಕೊಂಡು ಲಸಿಕೆಯನ್ನು ಹಾಕತಕ್ಕ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಬಗ್ಗೆ ಮುಂಜಾಗರೂಕತೆ ಕ್ರಮ ಕೈಗೊಳ್ಳುತ್ತೇವೆ. ಒಂದು ಸಾವಿರ ಮಂದಿ ಮಲೇರಿಯಾ ಪ್ರಕರಣಗಳಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಪತ್ರಿಕೆಗಳಲ್ಲಿ ಏನು ವರದಿ ಬಂದಿದೆ ಅದು ಸರಿಯಲ್ಲವೆಂದು ಹೇಳಿದೆ. ಆ ವರದಿಯಲ್ಲಿ ಸತ್ಯಾಂಶ ಇಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಜೆ. ಸಿ. ಮಂಜುನಾಥಸ್ವಾಮಿ.—ಹುಳಿಯಾರದಲ್ಲಿ ರೆಕಾರ್ಡ್ ಇದೆ.

ಅಧ್ಯಕ್ಷರು.—ಮಂತ್ರಿಗಳು ನೋಟ್ ಮಾಡಿಕೊಂಡಿದ್ದಾರೆ, ಬಿಡಿ

ವರದಿಯನ್ನೊಪ್ಪಿಸಂವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಬಾಬುಗೌಡ ಆರ್. ಪಾಟೀಲ್.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯು ಒಪ್ಪುವುದೆಂದು ಭಾವಿಸುತ್ತೇನೆ.

ಸಭೆಯು ಒಪ್ಪಿಗೆ ನೀಡಿತು

ಗಮನ ಸೆಳೆಯುವ ಸೂಚನೆಗಳು

೧ ಮೈಸೂರು ನಗರದಲ್ಲಿ ರಾಮ ಜನ್ಮಭೂಮಿಯ ಮೆರವಣಿಗೆಯ ಸಂದರ್ಭದಲ್ಲಿ ಪ್ರಮುಖರ ಮೇಲೆ ಪೋಲೀಸರಿಂದ ಹಲ್ಲೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ತಾರೀಖು ೨೨-೬-೧೯೯೦ರಂದು ಮೈಸೂರು ನಗರದಲ್ಲಿ ಶ್ರೀರಾಮ ಜನ್ಮಭೂಮಿಯ ಕುರಿತಾಗಿ ಮೆರವಣಿಗೆ ಹೊರಟಾಗ ಪೋಲೀಸರು ಕೆಲವು ಪ್ರಮುಖರ ಮೇಲೆ ಹಲ್ಲೆ, ನಡೆಸಿ ಗುಲ್ಬರ್ಗ ಜೈಲಿಗೆ ಕಳುಹಿಸಿದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಮಜನ್ಮಭೂಮಿ-ಬಾಬರಿ ಮಸೀದಿ ಪ್ರಕರಣವನ್ನು ಬಗೆಹರಿಸಲು ಕೇಂದ್ರ ಸರ್ಕಾರವು ವಿಫಲವಾದುದರ ವಿರುದ್ಧ ವಿಶ್ವ ಹಿಂದೂಪರಿಷತ್ತಿನ ಕೇಂದ್ರೀಯ ಘಟಕವು ರೂಪಿಸಿದ ಎರಡನೆಯ ಮತ್ತು ಪ್ರಮುಖ ಹಂತ ಕಾರ್ಯಕ್ರಮದ ಅಂಗವಾಗಿ ಅಯೋಧ್ಯೆಯಲ್ಲಿ ರಾಮಮಂದಿರವನ್ನು ಕಟ್ಟುವುದಕ್ಕೆ ಸಂಬಂಧಿಸಿದಂತೆ ಮೈಸೂರಿನ ಸ್ಥಳೀಯ ಹಿಂದೂ ಪರಿಷತ್ತಿನ ಪದಾಧಿಕಾರಿಗಳು ೫೦ ಮಂದಿ ದಿನಾಂಕ ೨೨-೬-೧೯೯೦ರಂದು ಕೆ. ಆರ್. ವೃತ್ತದ ತಾತಯ್ಯ ಪ್ರತಿಮೆಯ ಹತ್ತಿರ ಕೂಳಿತು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಿ ಮೆರವಣಿಗೆ ಹೊರಡಲು ಯೋಚಿಸಿದ್ದರು. ೧೯೯೦ರ ಮೇ ಜೂನ್ ತಿಂಗಳಿನಲ್ಲಿ ಮೈಸೂರಿನಲ್ಲಿ ಕೋಮು ಗಲಭೆ ನಡೆದಿದ್ದುದರಿಂದ ಪರಿಸ್ಥಿತಿ ಗಂಭೀರವಾಗಿದ್ದು ಸಾಮಾನ್ಯ ವಾತಾವರಣವನ್ನು ತರಲು ಪೋಲೀಸರು ಪ್ರಯತ್ನಿಸುತ್ತಿದ್ದರು ಈ ರೀತಿಯ ಮೆರವಣಿಗೆಯನ್ನು ತೆಗೆದುಕೊಂಡು ಹೋದಲ್ಲಿ ಅದು ಶಾಂತಿಭಂಗ ಉಂಟು ಮಾಡಬಹುದೆಂದು ಮೈಸೂರಿನ ಪೋಲೀಸ್ ಕಮೀಷನರು ಭಾವಿಸಿದರು. ಆದುದರಿಂದ ಖಾಸಗಿ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಗೂ ಜನರನ್ನು ರಕ್ಷಿಸಲು ಅವರು ಕರ್ನಾಟಕ ಪೋಲೀಸ್ ಕಾಯಿದೆ ೫೫ನೇ ಸೆಕ್ಷನ್ ಪ್ರಕಾರ